16

# “ಬೆಳಕಿನ ಮಕ್ಕಳಂತೆ ಜೀವಿಸುವದು”

# (5:7-14)

4 ರಿಂದ 6ನೇ ಅಧ್ಯಾಯಗಳ ಮೂಲಕ ಮೂರನೆಯ ಸಾರಿ, 5:7-14ರಲ್ಲಿ ನಿಶ್ಚಿತವಾದ ಮಾರ್ಗದಲ್ಲಿ “ನಡೆಯಲು” ಪೌಲನು ಎಫೆಸದವರಿಗೆ ಸೂಚಿಸುತ್ತಾನೆ. ಪ್ರೀತಿಯಲ್ಲಿನ ಕ್ರಿಸ್ತೀಯ ನಡೆಯ ಮೇಲಿನ ತನ್ನ ಬೋಧನೆಯನ್ನು ಸಮಾರೋಪದೊಡನೆ ಅದನ್ನು ಸಹ ಮುಂದಿನ ಭಾಗದಲ್ಲಿ ಪರಿಚಯಿಸುತ್ತಾ ಮುಗಿಸುತ್ತಿದ್ದಾನೆ. ಎಫೆಸದವರ ಹಿಂದಿನ ಜೀವನ ಶೈಲಿಯೊಡನೆ ಕ್ರೈಸ್ತತ್ವವನ್ನು ವ್ಯತ್ಯಾಸಮಾಡುತ್ತಾ, ಕತ್ತಲೆಯಿಂದ ತಿರುಗಿ ಬೆಳಕಿನ ಮಕ್ಕಳಾಗಿ ನಡೆಯುವಂತೆ ಅವರಿಗೆ ಆತನು ಸವಾಲನ್ನು ಒಡ್ಡುತ್ತಾನೆ.

## ಬೆಳಕಿನ ಫಲಗಳನ್ನು ಹೊಂದಿರುವದು (5:7-10)

**7ನೀವು ಅವರೊಂದಿಗೆ ಪಾಲುಗಾರರಾಗಿರಬೇಡಿರಿ.**

**8ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ. 9ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ. 10ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಿರಿ.**

**ವಚನ 7.** ಈ ವಚನವು ಆದುದರಿಂದ ಎಂಬ ಜೋಡನಾ ಪದದ ಜೊತೆಯಲ್ಲಿದ್ದು, ನಿಶ್ಚಿತವಾಗಿ ವಿಚಾರದ ಪೂರ್ವಭಾವಿಯಾಗಿರುವುದಕ್ಕೆ ಸಂಬಂಧಿಸಿದ್ದಾಗಿದೆ. ಹೇಗೋ, NASB ಭಾಷಾಂತರಕಾರರು ಇದರೊಡನೆ ಹೊಸ ವಾಕ್ಯವನ್ನು ಪ್ರಾರಂಭಿಸಿದ್ದಾರೆ, ಮತ್ತು ಆ ವಾಕ್ಯವು 10ನೇಯ ವಚನದವರೆಗೂ ಮುಂದುವರೆದಿದೆ. ಲೈಂಗಿಕ ಪಾಪದಲ್ಲಿ ತೊಡಗಿರುವವರ ಮೇಲೆ ದೇವರ ಕೋಪವು ಸುರಿಯುವುದರಿಂದ, ತಾವು ಯಾರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಪೌಲನು ಎಫೆಸದವರಿಗೆ ಎಚ್ಚರಿಕೆಯನ್ನು ಕೊಡುತ್ತಾನೆ. ಇತರರನ್ನು ಪ್ರೀತಿಸುವ ಮೂಲಕ ದೇವರನ್ನೂ ಮತ್ತು ಕ್ರಿಸ್ತನನ್ನೂ ಅನುಸರಿಸಿರಿ ಎಂದು ಅವರಿಗೆ ಆತನು ಹೇಳುತ್ತಾನೆ. ಈ ಸೂಚನೆಯು **ಅವರೊಂದಿಗೆ ಪಾಲುಗಾರರಾಗಿರಬೇಡಿರಿ** ಎಂಬ ಪದಗಳನ್ನು ಅನುಸರಿಸುವವು ಆಗಿವೆ.

> ಯಾವುದು ಒಳಗೊಂಡಿದೆಯೋ ಅದು ಅನ್ಯಜನರ ಜಗತ್ತಿನ ಜೀವಿತದಲ್ಲಿನ ಎಲ್ಲಾ ಅಂಶಗಳಿಂದ ಸಾಮಾನ್ಯವಾದ ಅಂತರದಲ್ಲಿ ಇರುವುದಲ್ಲ ಆದರೆ ಅದರ ಅನೈತಿಕ ಅಂಶಗಳಿಂದ ನಿರ್ಧಿಷ್ಟವಾಗಿ ಬೇರೆಯಾಗುವದು ಆಗಿದೆ ಎಂದು ಎಫೆಸದಲ್ಲಿರುವ ಈ ಪ್ರಸಂಗವು ಸ್ಪಷ್ಟಪಡಿಸುವುದಾಗಿದೆ. ಓದುಗರೆಲ್ಲ ಅನ್ಯಜನರ ಅವಿಧೇಯತೆಯೊಡನೆ ಅವರ ಪಾಪದಲ್ಲಿ ಮತ್ತು ಅದರೊಡನೆ ಅವರ ಮೇಲೆ ಬರಬಹುದಾದ ನ್ಯಾಯತೀರ್ಪಿನೊಡನೆ ಪಾಲುಗಾರರಾಗಿರುವುದಿಲ್ಲ.[1]

**ವಚನ 8.** ಅನ್ಯಜನರ ಪಾಪದಲ್ಲಿ ಪಾಲ್ಗೊಳ್ಳುವುದನ್ನು ನಿರಾಕರಿಸುವುದಕ್ಕಾಗಿ ವೇದಭಾಗವು **ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ.** ಎಂದು ಸಕಾರಾತ್ಮಕ

ಕಾರಣವನ್ನು ಕೊಡುವುದಾಗಿದೆ. ಕ್ರೈಸ್ತರು ತಾವು ದೇವರ ಮಕ್ಕಳಾಗುವುದಕ್ಕಿಂತ ಮುಂಚೆ ಇದದ್ದಕ್ಕಿಂತಲೂ ಭಿನ್ನರಾಗಿರುತ್ತಾರೆ. ಅವರು ಹಿಂದೆ ಏನಿದ್ದರು ಮತ್ತು ಕ್ರೈಸ್ತರಾದ ಮೇಲೆ ಏನಾದರು ಎಂಬುದರ ಮಧ್ಯದ ಭಿನ್ನತೆಯು ಹಿಂದಿನ ಪತ್ರದಲ್ಲಿ ವಿವರಿಸಲ್ಪಟ್ಟಿದೆ (ನೋಡಿರಿ 2:1-22). ಬೆಳಕು (ಪಾಪದಿಂದ ರಕ್ಷಣೆಯನ್ನು ಆನಂದಿಸಿದ ಜೀವಿತ) ಮತ್ತು ಕತ್ತಲೆ (ಸೈತಾನ ಮತ್ತು ಪಾಪದಿಂದ ಪರಿಣಾಮವಾದ ಮರಣ) ಮಧ್ಯದ ಭಿನ್ನತೆಯು ಹಲವು ಬಾರಿ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲೂ ಕಂಡುಬಂದಿದೆ.[2] ಕತ್ತಲೆ ಮತ್ತು ಬೆಳಕುಗಳು ಪರಿವರ್ತನೆಯ ಜೊತೆ ವ್ಯತ್ಯಾಸವಾದ ಸಂಬಂಧವನ್ನು ಹೊಂದಿವೆ (ಕೊಲಸ್ಸೆ 1:12, 13; 1 ಪೇತ್ರ 2:9). ಎಫೆಸದಲ್ಲಿ, ಬೆಳಕು ಸತ್ಯವನ್ನು ಮತ್ತು ಜ್ಞಾನವನ್ನು (ನೋಡಿರಿ 1:18) ಮತ್ತು ಯಾವುದು ದೇವರನ್ನು ಸಂತೋಷಪಡಿಸುವದು (5:10) ಎಂಬುವುದನ್ನು ಪ್ರತಿನಿಧಿಸುವಾಗ, ಕತ್ತಲೆಯು ಅಲಕ್ಷತೆ (4:18), ಮತ್ತು ಅನೈತಿಕತೆ (5:3-14), ಇವುಗಳನ್ನು ಪ್ರತಿನಿಧಿಸುವುದಾಗಿವೆ.

ಎಫೆಸದವರು ಬೆಳಕಿನಲ್ಲಿ ಇದ್ದಾರೆ ಎಂದು ಪೌಲನು ಹೇಳುತ್ತಿಲ್ಲ, ಆದರೆ ಅವರೇ ಬೆಳಕಾಗಿದ್ದಾರೆ ಎಂದು ಹೇಳುತ್ತಿದ್ದಾನೆ. ಒಂದು ಸಾರಿ ಅವರು ಕತ್ತಲೆಯಲ್ಲಿದ್ದರು ಆದರೆ "...ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ" ಎಂದು ಅಪೊಸ್ತಲನು ಹೇಳುತ್ತಾನೆ. "ಕ್ರಿಸ್ತನಲ್ಲಿ" ಅಥವಾ "ಕ್ರಿಸ್ತನೊಳಗೆ" ಎಂಬುದು ಅವರ ಪರಿವರ್ತನೆಯ ಬಗೆಗೆ ಅವರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದರ ಬಗೆಗೆ ಮಾತನಾಡುತ್ತದೆ (ರೋಮಾಪುರ 6:3; ಗಲಾತ್ಯ 3:27). ಕ್ರಿಸ್ತನಲ್ಲಿ ಯಾವ ರೀತಿಯಲ್ಲಿ ಬಂದರು, ಅದು "ಬೆಳಕಿನ ಮಕ್ಕಳಂತೆ ನಡೆಯದು" ಆ ಪ್ರಕಾರ ನಡಕೊಳ್ಳಬೇಕೆಂದು ಪೌಲನು ಅವರನ್ನು ಎಚ್ಚರಿಸುವವನಾಗಿದ್ದಾನೆ. ಅವಿಶ್ವಾಸಿಗಳು ಅವಿಧೇಯತೆಯಿಂದ ಗುರುತಿಸಲ್ಪಡುತ್ತಿದ್ದು ಅವರು "ಅವಿಧೇಯರು" (5:6), ಎಂದು ಹೀಗೆ ಎಫೆಸದವರು ಬೆಳಕಿನೊಡನೆ ಗುರುತಿಸಲ್ಪಡುತ್ತಿದ್ದು ಅವರು "ಬೆಳಕಿನ ಮಕ್ಕಳು" ಎಂದು ಕರೆಯಲ್ಪಡುತ್ತಿದ್ದರು.

**ವಚನ 9.** "ಬೆಳಕಿನ ಮಕ್ಕಳಂತೆ ನಡೆಯುವದು" ಎಂಬುದರ ಬಗ್ಗೆ ಆತನು ವಿವರಿಸಲು ಹೊರಟಂತೆ, **ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ** ಎಂದು ಪೌಲನು ಬರೆಯುತ್ತಾನೆ. ಆ ಆವರಣ ಚಿನ್ಹೆಯ ಹೇಳಿಕೆಗಳು ಬೆಳಕು ಫಲವತ್ತಾದ ಭೂಮಿ ಅಥವಾ ಒಳ್ಳೆಯ ಮರ ಆಗಿದ್ದು ಅದರಲ್ಲಿ ಅದು "ಫಲಗಳನ್ನು" ಉತ್ಪಾದಿಸುತ್ತದೆ ಎಂದು ಚಿತ್ರಿಸುವುದಾಗಿದೆ. ಬೆಳಕಿನ ಫಲವು "ಕತ್ತಲೆಯ ಫಲವಿಲ್ಲದ ಕಾರ್ಯಗಳಿಗೆ" (5:11), "ಒಳ್ಳೆಯ ತನವನ್ನು" (*agathōsunē*), ಒಳಗೊಂಡು, ನಿರ್ಧಿಷ್ಟವಾಗಿ ನೈತಿಕ "ಒಳ್ಳೆಯತನ" ಎಂಬರ್ಥಕ್ಕೆ ವ್ಯತ್ಯಾಸವಾಗಿ ನಿಂತುಕೊಳ್ಳುತ್ತದೆ.[3] ಈ ವಿಚಾರವು "ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟಿವು. ನಾವು ಸತ್ಕಾರ್ಯಗಳನ್ನು ನಡೆಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು" ಎಂದು 2:10ರಲ್ಲಿ ಪೌಲನು ಹೇಳಿದ್ದರ ಪ್ರತಿಬಿಂಬವಾಗಿದೆ. "ಒಳ್ಳೆಯತನವು" ಆತ್ಮನ ಫಲದ ಭಾಗವಾಗಿವೆ (ಗಲಾತ್ಯ 5:22), ಮತ್ತು ಇದು ಇತರರೊಡನೆ ಕ್ರೈಸ್ತನ ಸಂಬಂಧದಲ್ಲಿ ಆತನ ಕಾರ್ಯಗಳನ್ನು ವರ್ಣಿಸುವದನ್ನು ವಿವರಿಸುವುದಕ್ಕಾಗಿ ಪೌಲನಿಂದ ಮಾತ್ರ ಹೊಸ ಒಡಂಬಡಿಕೆಯಲ್ಲಿ ಬಳಸಲ್ಪಟ್ಟಿದೆ. (ಇತರ ಬಳಿಕೆಗಾಗಿ, ನೋಡಿರಿ ರೋಮಾಪುರ 15:14; 2 ಥೆಸಲೋನಿಕ 1:11.)

"ನೀತಿವಂತಿಕೆ" (*dikaiosunē*)ಯು ದೇವರಿಂದ ನೇಮಿಸಲ್ಪಟ್ಟ ಶ್ರೇಣಿಯಿಂದ ದೇವರು ಮತ್ತು ಮನುಷ್ಯನ ಸಂಬಂಧದಲ್ಲಿ ಯಾವುದು ಸರಿ ಎಂದು ದೃಢಪಡಿಸುವುದನ್ನು ಮಾಡುವುದಾಗಿದೆ. "ಸತ್ಯ" (*alētheia*) ಎಂದರೆ "ಪ್ರಾಮಾಣಿಕತನ," "ಸುಳ್ಳಿಗೆ ವಿರುದ್ಧವಾದದ್ದು" ಎಂಬರ್ಥಕೊಡುತ್ತದೆ.[4] "ಸತ್ಯವೂ" ಸಹ ದೇವರ ವಾಕ್ಯವಾಗಿದೆ (ಯೋಹಾನ 17:17). ಪೌಲನು ಎಫೆಸದವರಿಗೆ "ಪ್ರೀತಿಯಲ್ಲಿ ಸತ್ಯವನ್ನು" ಮಾತನಾಡಲು ಮತ್ತು ನಿಮ್ಮಲ್ಲಿ

ಪ್ರತಿಯೊಬ್ಬನೂ ತನ್ನ ನೆರೆಯವನೊಡನೆ ಸತ್ಯವನ್ನೇ ಮಾತನಾಡಲು ಒತ್ತಾಯಿಸುವಾಗ, ಆತನು ಈ ಎರಡೂ ವಿಚಾರಗಳನ್ನು ಒತ್ತಿಹೇಳುವವನಾಗಿದ್ದಾನೆ (4:15, 25). "ಈ ಮೂರು ಸದ್ಗುಣಗಳಲ್ಲಿ ಪ್ರತಿಯೊಂದು [5:9] ಅದರ ಸಾಲಿನಲ್ಲಿ ಬಲು ಸಾಮಾನ್ಯವಾಗಿದೆ ಮತ್ತು ವಾಸ್ತವವಾಗಿ ಸಂಪೂರ್ಣ ಕ್ರಿಸ್ತೀಯ ಜೀವಿತಕ್ಕೆ ನಿಲ್ಲಬಹುದಾಗಿದೆ."[5]

**ವಚನ 10. ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳಿದುಕೊಳ್ಳಿರಿ** ಎಂಬುದು "ಬೆಳಕಿನ ಮಕ್ಕಳಂತೆ ನಡೆಯುವದು" ಎಂಬುದರ ಅರ್ಥವನ್ನು ಹೆಚ್ಚಿನ ವಿವರಣೆಯನ್ನು ಅರಿತಕೊಳ್ಳುವುದಾಗಿದೆ. ನಂತರದಲ್ಲಿ ಪೌಲನು "ಕರ್ತನ ಚಿತ್ತವೇನೆಂದು ಅರಿತುಕೊಳ್ಳಿರಿ" ಎಂದು ಹೇಳುತ್ತಾನೆ (5:17). "ಪರಿಶೋಧಿಸಿ ತಿಳಿದುಕೊಳ್ಳಿರಿ" (*dokimazontes*) ಇದರ ಸರಿಯಾದ ಅರ್ಥವು "ಪ್ರಯತ್ನಿಸು, ಸಾಧಿಸು, ವಿವೇಚಿಸು, ವಿಶಿಷ್ಟವಾದ" ಎಂದಾಗಿದೆ.[6] ಪರೀಕ್ಷಿಸು ಅಥವಾ ಸಾಧಿಸು ಯಾವುದು ದೇವರನ್ನು ಸಂತುಷ್ಟಿಗೊಳಿಸುವದು ಮತ್ತು ಆತನ ಚಿತ್ತವನ್ನು ಅರಿತುಕೊಳ್ಳುವದು ಇವುಗಳಿಗೆ ಒಂದು ಶ್ರೇಣಿಯ ಅವಶ್ಯಕತೆಯು ಇದೆ. ಆ ಶ್ರೇಣಿಯು ದೇವರ ವಾಕ್ಯವಾಗಿದೆ. ಕ್ರೈಸ್ತರು ದೇವರ ಚಿತ್ತದ ಜ್ಞಾನದಿಂದ ತುಂಬಿರಬೇಕು ಎಂದು ಕೊಲಸ್ಸೆ 1:9, 10ರಲ್ಲಿ ಪೌಲನು ಪ್ರಾರ್ಥಿಸಿದ್ದಾನೆ; ಎರಡನೆಯದಾಗಿ, ಅಲ್ಲೊಂದು ತಿಳುವಳಿಕೆಯು ಇದೆ; ಮತ್ತು ಮೂರನೆಯದಾಗಿ, ಅದು ದೇವರನ್ನು ಸಂತೃಪ್ತಿಪಡಿಸುವುದು ಆಗಿದೆ. "ಹೇಗೋ, ಕ್ರಿಸ್ತನ ಸುವಾರ್ತೆಗೆ ಯೋಗ್ಯರಾಗಿ" ಜೀವಿಸಬೇಕು (ಫಿಲಿಪ್ಪಿ 1:27) ಅದು ದೇವರ ವಾಕ್ಯದ ಶ್ರೇಣಿಯ ಮೂಲಕ ಜೀವಿಸುವದು ಮತ್ತು ಕಲಿಯುವದು ಆಗಿದೆ ಎಂದು ಪೌಲನು ಫಿಲಿಪ್ಪಯವರಿಗೆ ಪ್ರೋತ್ಸಾಹಿಸುತ್ತಾನೆ.

"... ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು" (1 ಯೋಹಾನ 4:1) ಎಂದು ಅಪೊಸ್ತಲನಾದ ಯೋಹಾನನು ತನ್ನ ಓದುಗರಿಗೆ ಹೇಳುತ್ತಾನೆ. ಈ ಪರೀಕ್ಷೆಯು ಒಂದು ಮಟ್ಟವನ್ನು ಸೂಚಿಸುವುದಾಗಿದೆ, ಮತ್ತು ಆ ಮಟ್ಟವು ದೇವರ ಪ್ರಕಟವಾಗುವಿಕೆಯೇ ಆಗಿದೆ. ಒಬಂಬ ವ್ಯಕ್ತಿಯು ಪ್ರತಿಯೊಂದು ವಿಚಾರವನ್ನು, ಪ್ರತಿಯೊಂದು ಮಾತನ್ನು, ಮತ್ತು ದೇವರ ಚಿತ್ತದ ಮೂಲಕ ಪ್ರಕಟವಾದ ಪ್ರತಿಯೊಂದು ಕಾರ್ಯವನ್ನು ಪರೀಕ್ಷಿಸತೊಡಗಿದಾಗ, ಆಗ ಕೇವಲ ಆಗ ದೇವರನ್ನು ಸಂತೋಷಪಡಿಸುವದು ಯಾವುದು ಎಂದು ತಿಳಿಯುತ್ತಾನೆ. ಪ್ರಾಚೀನ ಯೆಹೂದ್ಯರು ದೇವರ ಆ ಚಿತ್ತವನ್ನು ತಿಳಿದಿದ್ದರು ಯಾಕೆಂದರೆ ಅವರು ಆಜ್ಞಾಪಿಸಲ್ಪಟ್ಟ ಧರ್ಮಶಾಸ್ತ್ರದ ಹೊರಗೆ ಇದ್ದರು (ರೋಮಾಪುರ 2:18). ಒಬ್ಬ ವ್ಯಕ್ತಿಯು ದೇವರ ಪ್ರಕಟವಾದ ಚಿತ್ತವನ್ನು ತಿಳಿದಿದ್ದಾದರೆ, ದೇವರು ಯಾವುದರಿಂದ ಸಂತುಷ್ಟಿಗೊಳ್ಳುವನು ಎಂದು ಆತನು ಬಲ್ಲವನಾಗಿದ್ದಾನೆ. ವಾಕ್ಯದ ಮಟ್ಟದ ಮೂಲಕ ಆತನು ಜೀವಿತದ ಸಂದರ್ಭಗಳಿಗೆ ಪ್ರತಿಕ್ರಿಯಿಸಿದ್ದಾದರೆ, ಆತನು ತಾನು ದೇವರನ್ನು ಸಂತುಷ್ಟಿಗೊಳಿಸುವವನಾಗಿದ್ದಾನೆ ಎಂದು ತಿಳಿದಿದ್ದಾನೆ. ವಚನ 10ರಂತೆ, ಒಳ್ಳೆಯತನ, ನೀತಿವಂತಿಕೆ, ಮತ್ತು ಸತ್ಯದಲ್ಲಿ ಬೆಳಕಿನ ಮಕ್ಕಳಾಗಿ ಜೀವಿಸುವದು ಎಂಬುದರ ಅರ್ಥವು ಯಾವುದು ಕರ್ತನನ್ನು ಸಂತುಷ್ಟಿಗೊಳ್ಳಿಸುವದು, ವಾಸ್ತವವಾಗಿ, ಆತನನ್ನು ಸಂತುಷ್ಟಿಗೊಳ್ಳಿಸುವುದರಲ್ಲಿ ಯಾವುದು ಅವಶ್ಯ ಎಂದು ತಿಳಿಯುವದು ಆಗಿದೆ.

## ಕತ್ತಲೆಯ ಕಾರ್ಯಗಳನ್ನು ತಿರಸ್ಕರಿಸುವದು ಮತ್ತು ಹೊರಹಾಕುವದು (5:11-13)

**11ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ. 12ಆ ಜನರು ರಹಸ್ಯವಾಗಿ ನಡಿಸುವ ಕೆಲಸಗಳನ್ನು ಕುರಿತು ಮಾತಾಡುವದಾದರೂ ನಾಚಿಕೆಗೆ ಕಾರಣವಾಗಿದೆ. 13ಬೆಳಕಿನಿಂದ ಎಲ್ಲಾ ಕೃತ್ಯಗಳ ನಿಜಗುಣ ತೋಲಿಬರುತ್ತದೆ; ಆದರಿಂದ ಕೆಟ್ಟದ್ದು ಕೆಟ್ಟದ್ದೇ ಎಂದು ಕಾಣಿಸುವದು. ಪ್ರಕಟವಾಗಿರುವದೆಲ್ಲಾ ಬೆಳಕಿಗೆ ಸಂಬಂಧವಾದದ್ದು.**

**ವಚನಗಳು 11, 12.** ನೀತಿವಂತಿಕೆ ಮತ್ತು ದುಷ್ಟ ಜೀವನ ಶೈಲಿಯ ಮಧ್ಯದ ಭಿನ್ನತೆಯನ್ನು ಕೇಂದ್ರೀಕರಿಸಿ, **ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ** (5:11). ದೇವರ ಮಕ್ಕಳಾದಂಥ ನಾವು ಬೆಳಕಿನಲ್ಲಿದ್ದೇವೆ ನಾವು ಬೆಳಕಿನ ಮಕ್ಕಳಾಗಿ ಜೀವಿಸುವವರಾಗಿದ್ದೇವೆ ಮತ್ತು ಬೆಳಕಿನ ಫಲಗಳನ್ನು ನಾವು ಕೊಡುವವರಾಗಿದ್ದೇವೆ (5:8, 9). ಇದಕ್ಕೆ ವ್ಯತ್ಯಾಸವಾದಂತೆ, ಆತನನ್ನು ತಿಳಿಯದವರು ಕತ್ತಲೆಯಲ್ಲಿರುವವರು (5:8), ಅವಿಧೇಯರು (5:6), ಮತ್ತು "ಕತ್ತಲೆಯ ಕೃತ್ಯಗಳ ಹಣ್ಣಿಲ್ಲದಂಥವರು" ಎಂದು ವರ್ಣಿಸಲ್ಪಟ್ಟವರೂ ಆಗಿರುತ್ತಾರೆ.

"ಬೆಳಕಿನಲ್ಲಿರುವವರು" ಕತ್ತಲೆಯ ಕೃತ್ಯಗಳಲ್ಲಿ ಪಾಲ್ಗೊಂಡಿರಬಾರದು, ಆದರೆ "ಅವನ್ನು ಬೈಲಿಗೆ ತರುವಲ್ಲಿ" ಕ್ರಿಯಾಶೀಲರಾಗಿರಬೇಕು. "ಬೈಲಿಗೆತರು" ಇದು ಎಂಬ ಸಂಕೀರ್ಣ ಪದದ ಭಾಷಾಂತರವಾಗಿದ್ದು, "ಅಪರಾಧ," "ದೂಷಿಸುವದು," "ಶಿಸ್ತಿಗೆ" ಎಂಬರ್ಥವನ್ನು ಕೊಡುವುದಾಗಿದೆ.[7] 5:11-13ರಲ್ಲಿ, ಒತ್ತುಕೊಡುವಿಕೆಯು ಕತ್ತಲೆಯ ಕಾರ್ಯಗಳ ಮೇಲೆ ಆಗಿದೆ. ಕ್ರೈಸ್ತರು ಉದಾಸೀನವಾಗಿ ಕತ್ತಲೆಯನ್ನು ತಾಳಿಕೊಳ್ಳುವವರಲ್ಲ; ಆತನು ಕ್ರಿಯಾತ್ಮಕವಾಗಿ ಅದನ್ನು ಬೈಲಿಗೆ ತರುವವನು ಆಗಿದ್ದಾನೆ. ಜೊತೆ ಕ್ರೈಸ್ತರನ್ನು ಎಚ್ಚರಿಸುವುದಕ್ಕಾಗಿ ಹೊಸ ಒಡಂಬಡಿಕೆಯಲ್ಲಿ ಆ ಪದವು ಬಳಿಕೆಯಾದಾಗ (1 ತಿಮೋಥೆ 5:20; ತೀತ 1:9, 13), ಇಲ್ಲಿನ ಸಂದರ್ಭವು ಕತ್ತಲೆಯಲ್ಲಿರುವಂಥವರು ಅಂದರೆ ರಕ್ಷಿಸಲ್ಪಡದೆ ಇರುವವರ ಬಗ್ಗೆ ಮಾತನಾಡುತ್ತದೆ.

"ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ" ಎಂಬುದು ಬಲವಾದ ಎಚ್ಚರಿಕೆಯನ್ನು ಕೂಗಿ ಹೇಳುವುದಾಗಿದೆ. ಆ ಕ್ರೈಸ್ತರು ಕತ್ತಲೆಯ ವ್ಯವಹಾರದಲ್ಲಿ ಪಾಲ್ಗೊಂಡಿಲ್ಲ ಎಂದು ಘೋಷಿಸುವುದಾಗಿದೆ, ಆದರೆ ಕತ್ತಲೆಯನ್ನು, ಮಾತುಗಳಲ್ಲಿ ಮತ್ತು ಕೃತ್ಯಗಳಲ್ಲಿ ಎದುರಾಗಿ ಖಂಡಿಸುವವರಲ್ಲ, ಅವರು ವಚನ 12ರ ಪ್ರಕಾರ **ಆ ಜನರು ರಹಸ್ಯವಾಗಿ ನಡೆಸುವ ಕೆಲಸಗಳನ್ನು ಕುರಿತು ಮಾತನಾಡುವದಾದರೂ ನಾಚಿಕೆಗೆ ಕಾರಣವಾದ** ಕೆಲಸವಾಗಿದೆ ಎಂಬ ಮಾತುಗಳ ಮೇಲೆ ತಮ್ಮ ದೃಷ್ಟಿಯ ಮೂಲವನ್ನು ಹೊಂದಿದ್ದಾರೆ.[8] ಹೇಗೋ, ಕೆಲ ಸ್ಥಳಗಳಲ್ಲಿ ಪೌಲನಿಂದ ಬಳಸಲ್ಪಟ್ಟ *elencho* ಮಾತಿನ ಎಚ್ಚರಿಕೆಯನ್ನು ಸೂಚಿಸುವುದಾಗಿದೆ (ನೋಡಿರಿ 2 ತಿಮೋಥೆ 4:2; ತೀತ 2:15).

"ಮಾತನಾಡು" ಎಂಬುದು ನಿರಂತರವಾದ ಮತ್ತು ಪುನರಾವರ್ತಿತ ಕಾರ್ಯವನ್ನು ಸೂಚಿಸುವುದಾಗಿದೆ. ಕತ್ತಲೆಯ ಪಾಪಗಳು ಕ್ರೈಸ್ತರಿಗೆ ತಮಗೋಸ್ಕರ ತಮ್ಮಲ್ಲೇ ಅಥವಾ ಅವಿಶ್ವಾಸಿಗಳ ಮುಂದೆಯೂ ಕೂಡಾ ಮಾತನಾಡುತ್ತಾ ಇರುವ ಸಂಗತಿಗಳು ಅಲ್ಲ. ಅದಲ್ಲದೆ, ಕ್ರೈಸ್ತರು ಅಂಥ ನಡವಳಿಕೆಯನ್ನು ಎದುರಿಸುವರೂ ಮತ್ತು ಎದುರಿಸುವಂಥವರೂ ಆಗಿರುತ್ತಾರೆ. ಇಂದಿನ ದಿನಮಾನಗಳಲ್ಲಿ ಕ್ರೈಸ್ತರು ತಮ್ಮ ಜೊತೆ ಕ್ರೈಸ್ತರೊಂದಿಗೆ ಕೆಟ್ಟ ಸಂಗತಿಗಳ ಕುರಿತಾಗಿ ಕೇವಲ ಮಾತನಾಡುತ್ತಾ ಅದರಲ್ಲಿ ಇರಬಾರದು, ಆದರೆ ತೆಗೆಳಿಕೆ, ವಿಸಂಗತಿ, ಗರ್ಭಪಾತ, ಮತ್ತಿತರ ಪಾಪಗಳ ವಿರುದ್ಧವಾಗಿ ಖಡಾಖಂಡಿತವಾಗಿ ಖಂಡಿಸುವವರಾಗಿರಬೇಕು. ನಿಶ್ಚಿತವಾಗಿ, ಕ್ರೈಸ್ತನಾದವನು ಕತ್ತಲೆಗೆ ವ್ಯತ್ಯಾಸವಾದಂಥದ್ದು ಯಾವುದು ಮತ್ತು ಕತ್ತಲೆಯನ್ನು ಹಗೆ ಮಾಡುವಂಥಹ ಜೀವನ ಶೈಲಿಯನ್ನು ಅಭ್ಯಾಸಮಾಡಿಕೊಳ್ಳಲೇಬೇಕು, ಆದರೆ ಅದರ ವಿರುದ್ಧ ಕೆಲ ಸಮಯ ಸ್ಥಳಗಳಲ್ಲಿ ಖಂಡಿಸುವದು ಅವಶ್ಯ. ನೀತಿವಂತಿಕೆ ಜೀವನದ ಶಕ್ತಿ ಅತಿ ಅವಶ್ಯ ಎಂದು ಹೇಳಬೇಕಾಗಿಲ್ಲ ಆದರೆ ವಾಕ್ಯಗಳ ಶಕ್ತಿಯು ಕತ್ತಲೆಯನ್ನು ಬೈಲಿಗೆ ತರುವುದಾಗಿದೆ (ನೋಡಿರಿ ರೋಮಾಪುರ 1:18-32). S. D. F. Salmond ರವರು ಗಮನಿಸಿದಂತೆ,

> ಪ್ರಶ್ನಿಸಲ್ಪಟ್ಟ ಕಾರ್ಯಗಳ ರಹಸ್ಯದ ಕಾರಣವು ಅವುಗಳಿಗೆ ಯಾಕೆ ಅವಶ್ಯವಾಗಿದೆ ಎಂಬುದು ಬಾಹ್ಯವಾಗಿ ಆಕ್ಷೇಪಿಸಲ್ಪಟ್ಟಿವೆ; ಮತ್ತು ಈ ವಿಷಯದಲ್ಲಿ ಅವಗುಣಗಳು ರಹಸ್ಯದಲ್ಲಿ ನರಕಲೋಕದ ಅಭ್ಯಾಸವು ಸೂಚಿಸಲು ಕೂಡ ಅಸಹ್ಯವಾದದ್ದು;

ಹೆಚ್ಚಿನವರು ತೆಗಳುವ ಬದಲು ಮೌನವಾಗಿ ಉಪೇಕ್ಷಿಸುವವರಾಗಿರುತ್ತಾರೆ ...[9]

**ವಚನ 13.** ಕತ್ತಲೆಯು ಅಡಗಿಸಿದ್ದನ್ನು ಬೆಳಕು ಬೈಲಿಗೆ ತರುವುದಾಗಿದೆ. ಬೆಳಕು ಹೊಳೆದಾಗ, ಎಲ್ಲಾ ಕೃತ್ಯಗಳ ನಿಜಗುಣ ತೋರಿಬರುತ್ತದೆ. ಕತ್ತಲೆಯ ಕಾರ್ಯಗಳು ಬೆಳಕಿನಿಂದ ಬೈಲಿಗೆ ತರಲ್ಪಟ್ಟಾಗ, **ಎಲ್ಲಾ ಕೃತ್ಯಗಳ ನಿಜಗುಣ ತೋರಿಬರುತ್ತದೆ.** ಕ್ರೈಸ್ತರು ಕತ್ತಲೆಯ ಕೃತ್ಯಗಳ ಸ್ವಭಾವವನ್ನು ಬೈಲಿಗೆ ತಂದಾಗ, ಅವರು ಆ ಕತ್ತಲೆಯಲ್ಲಿ ಇರುವವುಗಳನ್ನು "ಬೆಳಕಿನಲ್ಲಿ" ತರುವ ಅವಕಾಶವನ್ನು ಮಾಡಿಕೊಳ್ಳುವರು. ಯೇಸು ಹೀಗೆ ಹೇಳಿದ್ದಾನೆ,

> ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವುದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವುದಿಲ್ಲ, ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವುದಿಲ್ಲ; ಆದರೆ ಸತ್ಯವನ್ನು ಅನುಸರಿಸಿ ನಡೆಯುವವನು ತಾನು ದೇವರಿಂದ ನಡೆಸಿಕೊಂಡು ತನ್ನ ಕೃತ್ಯಗಳನ್ನು ಮಾಡಿದ್ದೇನೆಂದು ತೋರಿಬರುವಂತೆ ಬೆಳಕಿಗೆ ಬರುತ್ತಾನೆ (ಯೋಹಾನ 3:19-21).

ಆತನು ಸತ್ಯವನ್ನು ಬೆಳಕಿನಂತೆಯೂ ಮತ್ತು ಕೆಟ್ಟತನವನ್ನು ಕತ್ತಲೆಯಂತೆಯೂ ಮಾತನಾಡಿದ್ದಾನೆ. ಜನರು ಕೆಟ್ಟತನದ ಕತ್ತಲೆಯನ್ನು ಪ್ರೀತಿಸಿ ಮತ್ತು ಬೆಳಕನ್ನು ದ್ವೇಶಿಸುವಾಗ, ಅವರು ನ್ಯಾಯತೀರ್ಪಿನತ್ತ ನಡೆಸುವ ಕತ್ತಲೆಯಲ್ಲಿ ಅವರು ಮುಂದುವರೆಯುತ್ತಾರೆ. ಸತ್ಯದ ಒಳ್ಳೆಯತನವನ್ನು ಪ್ರೀತಿಸುವವರು "ಬೆಳಕಿನಡೆಗೆ" ಬರುತ್ತಾರೆ ಮತ್ತು ದೇವರಿಂದ ಒಪ್ಪಿತವಾದ ತಮ್ಮ ಕಾರ್ಯಕ್ಕೆ ಭರವಸವುಳ್ಳವರಾಗಿರುತ್ತಾರೆ.

## ಎಚ್ಚರಿಕೆಯಿಂದ ಇರುವದು (5:14)

**14 ಆದದರಿಂದ -**
**ನಿದ್ರೆ ಮಾಡುವವನೇ, ಎಚ್ಚರವಾಗು!**
**ಸತ್ತವನ್ನು ಬಿಟ್ಟು ಏಳು!**
**ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು**
**ಎಂದು ಹೇಳಿಯದೆ.**

**ವಚನ 14.** "ಬೆಳಕಿನ ಮಕ್ಕಳ" ಬಗೆಗಿನ ಈ ಭಾಗವನ್ನು ಪೌಲನು **ನಿದ್ರೆ ಮಾಡುವವನೇ, ಎಚ್ಚರವಾಗು! ಸತ್ತವನ್ನು ಬಿಟ್ಟು ಏಳು! ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು** ಎಂಬ ಮೂರು ಸಾಲುಗಳ ಪದ್ಯವನ್ನು ವ್ಯಾಖ್ಯಾನಿಸುವ ಮೂಲಕ ಮುಗಿಸುತ್ತಾನೆ. ಆತನು ಈ ಪದ್ಯವನ್ನು ಎಂದು **ಆದುದರಿಂದ ... ಎಂದು ಹೇಳಿಯದೆ** ಪರಿಚಯಿಸುವ ಮೂಲಕ 4:8ರಲ್ಲಿ ಒಂದು ಸಾರಿ ಆತನು ಬಳಸಿದ ವೇದಭಾಗದ ವ್ಯಾಖ್ಯೆಗೆ ಸಮಾನವಾದ ವಿವರಣೆಯನ್ನು ಬಳಸಿದ್ದಾನೆ. ಹೇಗೋ, ಈ ಸಾಲುಗಳು ಸತ್ಯವೇದದಲ್ಲಿ ಎಲ್ಲಿಯೂ ಕಾಣಿಸಿಕೊಳ್ಳುವುದಿಲ್ಲ. ಇದನ್ನೇ ಹೆಚ್ಚಾಗಿ ಹೋಲುವಂತ ಹಳೆ ಒಡಂಬಡಿಕೆಯ ಹೇಳಿಕೆಯು ಯೆಶಾಯ 60:1ರಲ್ಲಿ ಸಿಕ್ಕುವುದಾಗಿದೆ; ಆದರೆ ಅಲ್ಲಿ, ಯೆಶಾಯನು ತನ್ನ ಜನರಿಗೋಸ್ಕರ ಬೆಳಕನ್ನು ತಂದದ್ದಕ್ಕಾಗಿ ದೇವರನ್ನು ಸ್ತುತಿಸುವುದರ ಬಗ್ಗೆ ಆತನು ಮಾತನಾಡಿದ್ದಾನೆ. ಪೌಲನು ಈ ಪದ್ಯವನ್ನು ತನ್ನ ಓದುಗರಿಗಾಗಿ ಸವಾಲಿನಂತೆ ಮತ್ತು ವಾಗ್ದಾನದಂತೆ ಮಂಡಿಸಿದ್ದಾನೆ.

ಪೌಲನು ಹಳೆಯ ಒಡಂಬಡಿಕೆಯ ಒಂದು ಅಥವಾ ಹಲವು ವಚನಗಳ ವಿವರಣೆಯನ್ನು ಮಾಡಿದ್ದಾನೆ ಎಂದು ಕೆಲ ವ್ಯಾಖ್ಯಾನಕಾರರು ಯೋಚಿಸುವವರಾಗಿದ್ದಾರೆ. ಈ ವ್ಯಾಖ್ಯೆಯೊಡನೆ ಸಲುಗೆಯನ್ನು ತೆಗೆದುಕೊಳ್ಳುವದು ಹೊಸ ಒಡಂಬಡಿಕೆಯ ಲೇಖಕರಿಗೆ ಅಸಾಮಾನ್ಯವಾದ

ಸಂಗತಿಯೇನಾಗಿರಲಿಲ್ಲ, ಮತ್ತು ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡೂ ಇಂಥ ಪಾರಿಭಾಷಿಕದ ಹಿನ್ನಲೆಯನ್ನು ಸೂಚಿಸುವವು ಆಗಿವೆ. ಬೆಳಕು ತನ್ನ ಜನರಿಗೆ ಸಹಾಯಿಸಲು ಬರುವ ದೇವರಿಗೆ ಸಂಬಂಧಿಸಿದ್ದಾಗಿದೆ (ನೋಡಿರಿ ಧರ್ಮೋಪದೇಶಕಾಂಡ 33:2; ಕೀರ್ತನೆ 50:2; 80:1-3, 7, 19), ಮತ್ತು ಕ್ರಿಸ್ತನು ಸದಾಕಾಲ ಬೆಳಕಿನಂತೆ ಚಿತ್ರಿಸಲ್ಪಟ್ಟಿದ್ದಾನೆ (ನೋಡಿರಿ ಲೂಕ 2:32; ಯೋಹಾನ 1:4-9; 3:19-21; 8:12; 9:5; 12:46; ಪ್ರಕಟಣೆ 1:16).

ಅಪೊಸ್ತಲರ ಕೃತ್ಯಗಳು 17:28ರಲ್ಲಿರುವಂತೆ ಪೌಲನು ಯಾವುದೂ ಅಪೇಕ್ಷಿತ ಮೂಲದಿಂದ ವ್ಯಾಖ್ಯಾನ ಮಾಡುತ್ತಿದ್ದಾನೆಂದು ಇತರರು ಯೋಚಿಸುತ್ತಾರೆ, ಬಹುಶಃ ಕಲ್ಪಿತ ಬರಹಗಳು ಆದಿ ಕ್ರೈಸ್ತರ ಗೀತಗಳಲ್ಲಿನ ಅಥವಾ ಯೇಸುವಿನ ಬಗೆಗಿನ ದಾಖಲೆರಹಿತ ಹೇಳಿಕೆಗಳು ಆಗಿರಬಹುದು.[10] ಪದ್ಯದ ಮೂಲದ ಖಚಿತತೆಯನ್ನು ನಾವು ತಿಳಿಯದೆ ಇದ್ದಾಗ, ಪೌಲನ ಬಳಿಕೆಯು ಅದನ್ನು ಸ್ಪಷ್ಟಪಡಿಸುವಂತೆ ಕಾಣುತ್ತದೆ. ಕ್ರಿಸ್ತನ ಸಂದೇಶವನ್ನು ಯಾರು ಒಪ್ಪಿಕೊಳ್ಳುವವರು, ಅವರು ಆತ್ಮೀಕ ಮರಣದಲ್ಲಿದ್ದರೂ, ಪುನರುತ್ಥಾನದ ವಾಗ್ದಾನವನ್ನು ಹೊಂದಿದ್ದಾರೆ. ಕ್ರಿಸ್ತನ ಜೀವಿತ ಮತ್ತು ಬೆಳಕು (ನೋಡಿರಿ ಯೋಹಾನ 8:12; ರೋಮಾಪುರ 6:1-4) ತಮ್ಮ ಕತ್ತಲೆಯ ಕಾರ್ಯಗಳಿಂದ ತಿರುಗಿಕೊಳ್ಳುವಂತವರ ಮೇಲೆ ಕಾಯುವುದಾಗಿದೆ ಮತ್ತು “ಬೆಳಕಿನಲ್ಲಿ ನಡೆಯುವವರನ್ನು” (5:8) ಸೇರಿಸುವುದಾಗಿದೆ.

> ಸಭೆಯ ಬೆಳಕು ಕತ್ತಲೆಯಿಂದ ವಿರೋಧಿಸಲ್ಪಡುವ ಮತ್ತು ಹೊಂದಾಣಿಕೆಯಾಗದ ಸಮಾಜದ ಮೌಲ್ಯಗಳನ್ನು ಕ್ರಾಂತಿಕಾರಿಕವಾಗಿ ವಿರೋಧಿಸುವ ಮೌಲ್ಯಗಳ ಮೇಲೆ ಜೀವಿಸುವುದಾಗಿದೆ ... ಸುತ್ತಲಿನ ಕತ್ತಲೆಯಿಂದ ಮುತ್ತಲ್ಪಡುವದರ ಬದಲಾಗಿ, ವಿಶ್ವಾಸಿಗಳು ತಮ್ಮ ಪ್ರಭಾವವನ್ನು ಅದರ ಮೇಲೆ ಪ್ರಯೋಗಿಸಲು ಒತ್ತಾಯಿಸಲ್ಪಡುತ್ತಾರೆ ಎಂದು ತನ್ನ ಓದುಗರು ಅರಿತುಕೊಳ್ಳಬೇಕೆಂದು ಲೇಖಕ ಬಯಸುವವನಾಗಿದ್ದಾನೆ. ಇತರರಿಗೆ ದಾರಿದೀಪವಾಗಿ ಹೊಳೆಯುವ ನಡವಳಿಕೆಯನ್ನು ಹೊಂದಿದ ಸಮುದಾಯದಂತೆ ಓದುಗರು ಇದ್ದು, ಹೇಗೆ ಜೀವಿಸಬೇಕು ಎಂಬುದರ ಮೇಲೆ ಬೆಳಕು ಚೆಲ್ಲುವಂತೆ ಇದ್ದಾರೆ ... ಹೀಗೆ ಆ ಬೆಳಕು ತಮ್ಮ ಸುತ್ತಲಿನ ಕತ್ತಲನ್ನು ಪರಿವರ್ತಿಸಲು ಸಮರ್ಥವಾಗಿದೆ. ಬೆಳಕು ಕ್ರಿಸ್ತನನ್ನು ತನ್ನ ಮೂಲವಾಗಿ ಪ್ರಕಾಣಿಸುವುದರಿಂದ ಕತ್ತಲೆಯು ಬೆಳಕಿನೊಡನೆ ತನ್ನ ಸಂಘರ್ಷದಲ್ಲಿ, ತನ್ನ ಅಂತಿಮವಾದ ವಿಜಯವನ್ನು ಸಾಧಿಸದು.[11]

## ಅನ್ವಯ

### ಬೆಳಕಿನ ಮಕ್ಕಳು (5:7-14)

5:7-14ರಲ್ಲಿ ಪೌಲನು ಕ್ರೈಸ್ತರು ಹೇಗೆ “ನಡೆಯಬೇಕು” ಎಂಬುದರ ಮೂರನೆಯ ಹೇಳಿಕೆಯನ್ನು ಮಾಡುತ್ತಾ, ವಚನ 8ರಲ್ಲಿ “ಬೆಳಕಿನ ಮಕ್ಕಳಂತೆ ನಡೆಯಲು” ತನ್ನ ಓದುಗರಿಗೆ ಒತ್ತಾಯಿಸುವವನಾಗಿದ್ದಾನೆ.

*ವ್ಯತ್ಯಾಸ.* ವೇದಭಾಗವು “ಬೆಳಕು” ಮತ್ತು “ಕತ್ತಲೆ” ಮಧ್ಯ ವ್ಯತ್ಯಾಸವನ್ನು ಇರಿಸಿದೆ. “ಬೆಳಕು” ದೇವರನ್ನು, ದೇವರ ಮಾರ್ಗಗಳನ್ನು ಆತನ ಶಕ್ತಿಯನ್ನು, ಮತ್ತು ಕ್ರೈಸ್ತರನ್ನು ಪ್ರತಿನಿಧಿಸುವುದಾಗಿದೆ. “ಕತ್ತಲೆಯು” ಸೈತಾನನನ್ನು, ಜಗತ್ತಿನಲ್ಲಿ ಆತನ ಮಾರ್ಗಗಳನ್ನು, ಆತನ ಶಕ್ತಿಯನ್ನು ಮತ್ತು ಕಳೆದುಕೊಳ್ಳುವಿಕೆಯನ್ನು ಪ್ರತಿನಿಧಿಸುವುದಾಗಿದೆ.[12] “ಬೆಳಕು” ಮತ್ತು “ಕತ್ತಲೆಯು” ಕ್ರಿಸ್ತನನ್ನು ಮತ್ತು ಕೆಟ್ಟತನವನ್ನು ಪ್ರತಿನಿಧಿಸುವವು ಆಗಿವೆ (ಯೋಹಾನ 1:1-5, 9; 3:19-21; 8:12; 12:35, 36). ಮುಂದೆ ಬೆಳಕು ಮತ್ತು ಕತ್ತಲೆಯೊಡನೆಯ ಒಡನಾಟವು ನಂಬಿಗಸ್ತ ಕ್ರೈಸ್ತರೊಡನೆ ಮತ್ತು ಅಪನಂಬಿಗಸ್ತರೊಡನೆ ವ್ಯತ್ಯಾಸವಾಗಿ ಇರುವುದಾಗಿದೆ (1 ಯೋಹಾನ 2:4-11).

*ಭರವಸೆ.* ಬೆಳಕಿನಲ್ಲಿ ನಡೆಯುವದು ದೇವರೊಂದಿಗಿನ ಯೋಗ್ಯವಾದ ಸಂಬಂಧ ಮತ್ತು ಪಾಪದಿಂದ ನಿರಂತರ ಶುದ್ಧಿಗೊಳಿಸುವಿಕೆಯನ್ನು ಬಲಪಡಿಸುವುದಾಗಿದೆ (1 ಯೋಹಾನ 1:5-9).

*ಜ್ಞಾನ.* ಕ್ರೈಸ್ತರು ತಾವು ಫಲಗಳನ್ನು ಕೊಡುವಾಗ (5:9), ಯಾವುದು ದೇವರನ್ನು ಸಂತಸಗೊಳಿಸುತ್ತದೆ ಎಂಬುದನ್ನು ಕಂಡುಕೊಂಡಾಗ (5:10), ಮತ್ತು ಕತ್ತಲೆಯ ಕಾರ್ಯಗಳನ್ನು ಹೊರಹಾಕಿದಾಗ (5:11-14) ತಾವು "ಬೆಳಕಿನ" ಮಾರ್ಗದಲ್ಲಿ ನಡೆಯುತ್ತಿದ್ದಾರೆ ಎಂದು ಅರಿತವರಾಗುತ್ತಾರೆ. ಕ್ರೈಸ್ತರು ತಮ್ಮ ಜೀವಿತವನ್ನು ದೇವರಿಗೆ ಒಪ್ಪಿಸಿದಾಗ ಮತ್ತು ಆತನ ಜನರಂತೆ ಜೀವಿಸುವಾಗ, ಆತನು ಅವರಿಗೆ ಯೋಗ್ಯವಾದ ಫಲಗಳನ್ನು ಕೊಡಲು ಸಹಾಯಿಸುವವನಾಗಿದ್ದಾನೆ. ವಾಕ್ಯಭಾಗದ ಅಧ್ಯಯದ ಮೂಲಕ ಯಾವುದು ದೇವರನ್ನು ಸಂತುಷ್ಟಗೊಳಿಸುವದು ಎಂಬುದನ್ನು ಅವರು ಕಂಡುಕೊಳ್ಳುತ್ತಾರೆ. ಕ್ರೈಸ್ತರು ಯೋಗ್ಯವಾಗಿ ಜೀವಿಸಿದಾಗ ಮತ್ತು ದೃಢವಾಗಿ ಕೆಟ್ಟತನದ ವಿರುದ್ಧವಾಗಿ ಮಾತನಾಡುವುದರ ಜೊತೆ ಸಮಾಜದ ಮೇಲೆ ಬಲವಾದ ಪ್ರಭಾವವನ್ನು ಬಿರುವರು.

*"ಕರ್ತನಲ್ಲಿಯ ಬೆಳಕು."* ಪೌಲನು ಎಫೆಸದವರನ್ನು "ಕರ್ತನಲ್ಲಿಯ ಬೆಳಕು" ಎಂದು ಲಕ್ಷಿಕರಿಸಿದ್ದಾನೆ (5:8). ಒಬ್ಬನು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದಾಗ, ಆತನು ದೇವರೊಂದಿಗೆ ಮರುಸಂಧಾನ ಹೊಂದಿದ್ದಾನೆ, ಪಾಪದಿಂದ ಬಿಡುಗಡೆಹೊಂದಿದ್ದಾನೆ, ಮತ್ತು ಎಲ್ಲಾ ಆತ್ಮೀಕ ಆಶೀರ್ವಾದಗಳಿಗೆ ಬಾಧ್ಯನಾಗಿ ಮಾಡಲ್ಪಟ್ಟಿದ್ದಾನೆ ಆತನು ಜಗತ್ತಿಗೆ ಬೆಳಕಾಗಿದ್ದಾನೆ (ನೋಡಿರಿ 1:3-14; 2:13-16; ಮತ್ತಾಯ 5:16).

*ಮುಕ್ತಾಯ.* ಕ್ರೈಸ್ತರು ಜಗತ್ತಿನಲ್ಲಿದ್ದಾರೆ, ಆದರೆ ಅವರು ಜಗತ್ತಿನವರಲ್ಲ. ಸಭೆಯು ಜಗತ್ತನ್ನು ಒಪ್ಪಿಕೊಳ್ಳುವುದಿಲ್ಲ, ಆದರೆ ಬೆಳಕು ಕತ್ತಲೆಯ ಮೇಲೆ ಬೀಳುವಾಗ ಅದರ ಜೊತೆಗೆ ಸಂಘರ್ಷಿಕ್ಕಿಳಿಯುತ್ತದೆ.

Jay Lockhart

**ದೇವರನ್ನು ಅನುಕ;ರಿಸುವವರು (5:1-14)**

ಜಗತ್ತಿನಲ್ಲಿ ಎಲ್ಲೆಲ್ಲಿಯೂ ಇರುವ ಮಕ್ಕಳ ಒಂದು ಲಕ್ಷಣ ಎಂದರೆ ತಾವು ಪ್ರೀತಿಸುವ ಜನರನ್ನು ಅವರು ಅನುಕರಿಣಿಸುವವರಾಗಿರುತ್ತಾರೆ. ಆತನು ಏನನ್ನು ತಿನ್ನಬಯಸುತ್ತಾನೆ ಎಂದು ಆತನ ತಾಯಿ ಕೇಳಿದ್ದಾದರೆ, ಆ ಮಗನು, "ಅಪ್ಪನು ಏನನ್ನು ತಿನ್ನುತ್ತಿದ್ದಾನೋ ಅದನ್ನೇ" ಎಂದು ಲಕ್ಷಕೊಡುವವರಾಗಿದ್ದಾರೆ.

ದೇವರ ಮಕ್ಕಳಾದಂಥ ನಾವು "ದೇವರನ್ನು ಅನುಸರಿಸುವವರು" (5:1) ಎಂದು ಕರೆಯಲ್ಪಟ್ಟಿದ್ದೇವೆ. ನಾವು ದೇವರಂತೆ ಆಗಬಯಸಿದ್ದೇ ಆದರೆ, ನಾವು ಹೇಗೆ ಜೀವಿಸಬೇಕು? 5:1-14ರಲ್ಲಿ, "ದೇವರ ಅನುಸರಿಸುವವರ" ಹಾಗಿರುವದು ಎರಡು ರೀತಿಯಲ್ಲಿ ಇರುವುದಾಗಿದೆ ಎಂದು ಪೌಲನು ಹೇಳುತ್ತಾನೆ.

1. *ಪ್ರೀತಿಯ ಮಕ್ಕಳು* (5:1-7). ಆದುದರಿಂದ ದೇವರ ಪ್ರೀಯರಾದ ಮಕ್ಕಳಿಗೆ ತಕ್ಕಹಾಗೆ ಆತನನ್ನು ಅನುಸರಿಸುವವರಾಗಿರಿ. "ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ... ತನ್ನನ್ನೇ ಸಮರ್ಪಿಸಿಕೊಂಡ ಪ್ರಕಾರ ..." (5:1, 2).

ಈ ಮೊದಲ ಅರಿತುಕೊಳ್ಳುವಿಕೆಯ ಲಕ್ಷಣದ ಮೂಲಮಂತ್ರವು "ಆದುದರಿಂದ" ಎಂಬ ಪದದಲ್ಲಿ ಕೂಡಿಕೊಂಡಿದೆ. ಆ ಪದವು 4:32ರಲ್ಲಿ ಹೇಳಲ್ಪಟ್ಟ. "ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ" ಎಂದು ಹೇಳಲ್ಪಟ್ಟ ತತ್ವದೆಡೆಗೆ ನಮ್ಮನ್ನು ತಳ್ಳುವುದಾಗಿದೆ. ದೇವರು ಪ್ರೀತಿಯುಳ್ಳ ಕ್ಷಮೆಗಾರನಂತೆ ಇಲ್ಲಿ ಚಿತ್ರಿಸಲ್ಪಟ್ಟಿದ್ದಾನೆ. ನಮ್ಮಷ್ಟಕ್ಕೆ ನಾವು ಪ್ರೀತಿಯುಳ್ಳ ಕ್ಷಮೆಗಾರರು ಆದಾಗ ದೇವರನ್ನು ಅನುಸರಿಸುವ ಪೌಲನ ಆಜ್ಞೆಯನ್ನು

ಸಂಪೂರ್ಣಗೊಳಿಸುವಲ್ಲಿ ನಾವು ಯೋಗ್ಯರು ಆಗುತ್ತೇವೆ. ನಾವು ಉಪಕಾರಿಗಳಾಗಿರಬೇಕು; ನಾವು ಕರುಣೆಯುಳ್ಳವರಾಗಿರಬೇಕು; ಕಠಿಣರಾಗಿರಬಾರದು, ಎಚ್ಚರಗೇಡಿಗಳಾಗಿರಬಾರದು, ತಟಸ್ಥ ಸ್ಥಿತಿ ಹೊಂದಿದವರಾಗಿರಬಾರದು. ನಾವು ಕೂಡ ಕ್ಷಮಿಸಲ್ಪಟ್ಟಿದ್ದೇವೆ. ಆ ಪ್ರೀತಿಯು ನೈಜತೆಯನ್ನು ಮಾಡುವುದಾಗಿದೆ, ಪ್ರೀತಿಗಾಗಿ ಕ್ಷಮಿಸದೇ ಇರುವಂಥದ್ದು ಅದು ನಿಜವಾದ ಪ್ರೀತಿಯು ಅಲ್ಲ.

ಮತ್ತಾಯ 18ರಲ್ಲಿ, ಈ ತತ್ವದಲ್ಲಿ ಯೇಸುವಿನದೇ ಆದ ವ್ಯಾಖ್ಯಾನವನ್ನು ನಾವು ಕಂಡುಕೊಳ್ಳುತ್ತೇವೆ. ಒಬ್ಬ ಮನುಷ್ಯನು ತನ್ನ ಸಹೋದರನನ್ನು ಎಷ್ಟು ಸಾರಿ ಕ್ಷಮಿಸಬಹುದೆಂದು ಪೇತ್ರನು ಕರ್ತನನ್ನು ಕೇಳಿದನು. ಒಬ್ಬ ವ್ಯಕ್ತಿಯನ್ನು ಮೂರು ಸಾರಿ ಕ್ಷಮಿಸಬಹುದು; ಅದರ ಮೇಲೆ ಆತನು ಯಾವುದೇ ವಿಧವಾದ ಬಂಧದಿಂದ ಆತನು ಮುಕ್ತನಾಗಿರುತ್ತಿದ್ದನು ಎಂದು ಮಾತ್ರ ಯೆಹೂದಿ ರಬ್ಬಿಗಳು ಕಲಿಸಿದ್ದರು. ಪೇತ್ರನು, ಬಹುಶಃ ಏಳುಸಾರಿ ಎಂದು ತಾನೇ ತನ್ನ ಪ್ರಶ್ನೆಗೆ ಉತ್ತರವನ್ನು ಕೊಡುವ ಮೂಲಕ ತಾನು ಅನುಶಾಸನದ ಅಡಿಯಲ್ಲಿ ತಾನು ಎಷ್ಟರ ಮಟ್ಟಿಗೆ ಪ್ರಬುದ್ಧನಾಗಿದ್ದಾನೆ ಎಂದು ಕರ್ತನನ್ನು ಚಕಿತಗೊಳಿಸಬೇಕೆಂದು ಬಯಸಿರಬೇಕು. ಯೇಸು "ಏಳು ಸಾರಿ ಎಂದಲ್ಲಾ, ಏಳೆಪ್ಪತ್ತು ಸಾರಿ ಎಂದು ನಾನು ನಿನಗೆ ಹೇಳುತ್ತೇನೆ" ಎಂದು ಹೇಳಿದನು (ಮತ್ತಾಯ 18:22). ಇಲ್ಲಿನ ಸಂಗತಿ ಎಂದರೆ ಅಂಕಿ ಅಂಶವನ್ನು ಇಟ್ಟುಕೊಳ್ಳುವದಲ್ಲ, ಆದರೆ ಅಲ್ಲಿನ ಮನೋಭಾವನೆಯೇ ಆಗಿದೆ. ಕ್ಷಮಿಸುವ ಮನೋಭಾವನೆಯು ದೇವರ ಪ್ರೀತಿಯನ್ನು ಅನುಕರಿಸುವುದು ಆಗಿದೆ.

ನಾವು ದೇವರನ್ನು ದುಃಖಿತನನ್ನಾಗಿಸಿದ್ದೇನೆಯಾ? ಹೌದು ನಾವು ಮಾಡಿದ್ದೇವೆ! ನಾವು ಆತನ ವಿರುದ್ಧ ಬಂಡೆದಿದ್ದೇವೆ, ನಿರಾಶನನ್ನಾಗಿಸಿದ್ದೇವೆ, ಆತನನ್ನು ದ್ವೇಷಿಸಿದ್ದೇವೆ, ಆತನನ್ನು ತಿರಸ್ಕರಿಸಿದ್ದೇವೆ. ಇನ್ನೂ ಆತನು ನಮ್ಮನ್ನು ಕ್ಷಮಿಸುತ್ತಾನೆ. ಶಿಲುಬೆಯ ಮೇಲಿನ ಕ್ರಿಸ್ತನ ಮರಣವು, ದೇವರ ಭಾಗಸ ಕ್ಷಮಾಪಣೆಗೆ ಸ್ಪಷ್ಟವಾದ ಅರಿತುಕೊಳ್ಳುವಿಕೆ ಆಗಿದೆ (ರೋಮಾಪುರ 5:8). ಅದು ನಾವು ತೋರಬಹುದಾದ ಕ್ಷಮಾಪಣೆಯ ನಿಖರವಾದ ರೀತಿ ಯಾಗಿದೆ.

ಈ ತರದ ಕ್ಷಮಾಪಣೆಗೆ ಯಾವುದು ಪ್ರೇರೇಪಿಸುವುದಾಗಿದೆ? ಪ್ರೀತಿಯೇ. ಅಧ್ಯಾಯ 2ರಲ್ಲಿ ಪೌಲನು ಏನನ್ನು ಬೋಧಿಸಿದ್ದಾನೆ ಎಂಬುದನ್ನು ನೆನಪಿಡಿರಿ. ನಾವು ಪಾಪದಲ್ಲಿ ಸತ್ತವರಾಗಿದ್ದೇವೆ; ಈ ಜಗತ್ತಿನ ಜೀವನರೀತಿಯನ್ನು ನಾವು ಅನುಸರಿಸುವವರಾಗಿದ್ದೇವೆ ಎಂದು ಆತನು ಹೇಳಿದ್ದಾನೆ. ನಾವು ಅವಿಧೇಯರಾಗಿದ್ದೇವೆ; ನಮ್ಮ ದೇಹದ ಆಶೆಯ ಮೇಲೆಯೇ ನಾವು ನಡಕೊಳ್ಳುತ್ತಿದ್ದೇವೆ. "ಆದರೆ ಕರುಣಾಮಯಿಯಾಗಿರುವ ದೇವರು ನಮ್ಮ ಮೇಲೆ ಮಹಾಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು ..." (2:4, 5).

ಶಿಲುಬೆಯು ಕ್ಷಮಾಪಣೆಯನ್ನು ಒಂದು ನೈಜತೆಯನ್ನಾಗಿ ಮಾಡಿತು, ಆದರೆ ದೇವರ ಪ್ರೀತಿಯು ಶಿಲುಬೆಯನ್ನು ನೈಜವಾಗಿ ಮಾಡಿತು. ಇದೇ ಪೌಲನ ಬೋಧನೆಯಾಗಿದ್ದು ದೇವರು ಕ್ರಿಸ್ತನಲ್ಲಿ ನಮ್ಮನ್ನು ಕ್ಷಮಿಸಿದ ಹಾಗೆ ನಾವೂ ಕೂಡಾ ಒಬ್ಬರನ್ನೊಬ್ಬರು ಕ್ಷಮಿಸೋಣ. ಅಂತೆಯೇ ಪೌಲನು ಆದುದರಿಂದ ದೇವರ ಪ್ರೀಯರಾದ ಮಕ್ಕಳಿಗೆ ತಕ್ಕಹಾಗೆ ಆತನನ್ನು ಅನುಕರಿಸುವವರಾಗಿರಿ ..." ಎಂದು ಪ್ರಬೋಧಿಸಿದ್ದಾನೆ (5:1, 2).

ನಮಗೆ ತಪ್ಪುಮಾಡಿದವರನ್ನು ಕ್ಷಮಿಸುವತ್ತ ನಾವು ಮುಂದುವರೆಯಬೇಕೆಂದು ಪೌಲನು ನಮಗೆ ಸವಾಲನ್ನು ಒಡ್ಡುತ್ತಾನೆ. ಇದು ಮಾಡಲು ಬಲು ಕಠಿಣವಾದದ್ದು, ಯಾಕೆಂದರೆ ವೈಶಮ್ಯವನ್ನು ಇರಿಸುವದು ಬಲು ಸರಳವಾದದ್ದು ಮತ್ತು ಅದು ನಮಗೆ ಒಳಗೆ ಕೊರಗಿಸುವುದಾಗಿದೆ. ಕ್ಷಮಿಸುವುದಕ್ಕೆ ಇರುವ ದೇವರ ಚಿತ್ತವು ನಮ್ಮ ಶ್ರೇಣಿಯಾಗಿದೆ.

(1) ಪುನರುತ್ಪತ್ತಿಯ ಒಂದು ಉದಾಹರಣೆ. ಆತನಂತೆ ಆಗಲು ನಮಗೆ ಇನ್ನೂ ಹೆಚ್ಚಿನ ಬೋಧನೆಯ ಅವಶ್ಯಕತೆಯು ನಮಗಿದೆ ಎಂದು ದೇವರು ಬಲ್ಲವನಾಗಿದ್ದಾನೆ; ನಾವು

ಪುನರುತ್ಪತ್ತಿಯಾಗಲು ಒಂದು ಉದಾಹರಣೆಯ ಅಗತ್ಯತೆಯು ನಮಗಿದೆ. ಪ್ರತಿಯೊಬ್ಬ ಕ್ರೈಸ್ತರಿಗೂ ಇರುವ ಆ ಉದಾಹರಣೆಯು ದೇವರು ಮಾನವ ರೂಪದಲ್ಲಿ ಬಂಧಂತವನಾದ ಯೇಸು ಕ್ರಿಸ್ತನೇ. ದೇವರಿಗೆ ಇಷ್ಟವಾದದ್ದು ಯಾವದು ಎಂದು ನೀವು ಬಲ್ಲವರಾಗಿದ್ದೀರಾ? ದೇವರು ಎಷ್ಟು ಪ್ರೀತಿಸುತ್ತಾನೆ ಎಂದು ನೀವು ತಿಳಿಯಬಯಸುತ್ತಿರಾ? ಆಗ ಯೇಸುವಿನತ್ತ ನೋಡಿರಿ. ಆತನು "ನಿಮ್ಮನ್ನು ಪ್ರೀತಿಸಿದನು, ಮತ್ತು ನಮಗೋಸ್ಕರ ತನ್ನನ್ನೇ ಕೊಟ್ಟನು." ಇದೇ ಇಂದು ಸ್ಪಂದಿಸುವ ಪ್ರೀತಿಯಾಗಿದೆ: ಸ್ವಾರ್ಥವು ಬೇಡ ಎಂದು ಹೇಳುವ ಸಾಮರ್ಥ್ಯ ಮತ್ತು ಒಬ್ಬರಿಗೋಸ್ಕರ ತನ್ನನ್ನೇ ಬಿಟ್ಟುಕೊಡುವಂಥದ್ದು ಆಗಿದೆ. ನಿಜಪ್ರೀತಿಯು, ನಮ್ಮ ಕರ್ತನಿಂದ ಪ್ರಾಯೋಗಿಸಲ್ಪಟ್ಟಿತು, ಇದು ಸ್ವಾರ್ಥರಹಿತವಾದದ್ದು, ಕೊಡುವಂಥದ್ದು, ತ್ಯಾಗಮಯವಾದದ್ದು, ಇನ್ನೊಬ್ಬನು ಆಶೀರ್ವದಿಸಲ್ಪಡುವುದಕ್ಕಾಗಿ ನಮ್ಮ ಸ್ವತದ ಹಕ್ಕನ್ನು ಈಜುಕೊಡುವ ನಮ್ರವಾದ ಚಿತ್ತವಾಗಿದೆ.

ನಿಶ್ಚಿತವಾಗಿ, ಇದು ನಮ್ಮ ಜಗತ್ತನ್ನು ನಿರ್ಮಿಸಿಕೊಳ್ಳುವ ಪ್ರೀತಿಯ ಮಾದರಿಯಲ್ಲ. ಜಗತ್ತಿನಸ ಮಾದರಿಯು: "ನಮ್ಮ ಅವಶ್ಯಕತೆಗಳನ್ನು ನೀಗಿಸಿಕೊಳ್ಳುವವರಗೆ, ನೀನು ಸುತ್ತಮುತ್ತ ಇರಬಹುದು" ಎಂದಾಗಿದೆ. ಜಗತ್ತಿನ ಪ್ರಕಾರದ ಪ್ರೀತಿಯ ಅಭ್ಯಾಸಗಳು ವಸ್ತುಗಳ ಮೇಲೆ ಅವಲಂಭಿತವಾಗಿವೆ. "ನೀನು ಪ್ರೀತಿಗೆ ಯೋಗ್ಯನಾಗಿರುವುದರಿಂದ ನಾನು ನಿನ್ನನ್ನು ಪ್ರೀತಿ ಸುತ್ತೇನೆ"; "ನೀನು ನನಗೆ ಒಳ್ಳೆಯನು ಅನ್ನಿಸುವುದರಿಂದ ನಾನು ನಿನ್ನನ್ನು ಪ್ರೀತಿಸುತ್ತೇನೆ"; "ನೀನು ನನಗೆ ಯಾವುದೇ ರೀತಿಯಿಂದ ಎದುರಾಡದ್ದರಿಂದ ಅಥವಾ ನನ್ನ ಭಾವನೆಗಳಿಗೆ ನೋವನ್ನು ಮಾಡದ್ದರಿಂದ ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಅದು ಹೇಳುತ್ತದೆ.

ದೇವರ ಪ್ರೀತಿಯು ಆ ರೀತಿಯದ್ದಲ್ಲ. ದೇವರ ರೀತಿಯ ಪ್ರೀತಿಯು "ನೀನು ನನ್ನನ್ನು ವಿರೋಧಿಸಬಹುದು, ನನ್ನ ಮಿತ್ರನೇ, ನೀನು ಏನೇ ಮಾಡು, ನೀನು ನನ್ನ ಪ್ರೀತಿಯನ್ನು ಮರಳಿ ಪಡೆಯುತ್ತಿ!" ಎಂದು ಹೇಳುತ್ತದೆ. ದೇವರಿಗೋಸ್ಕರದ ಪ್ರೀತಿಯು ಎಂದಿಗೂ ವಸ್ತುಗಳಿಂದ ನಿಯಂತ್ರಿಸಲ್ಪಡುವುದಿಲ್ಲ. ಪ್ರೀತಿಯು ದೇವರಿಂದ ಪ್ರವಹಿಸುವುದಾಗಿದೆ ಯಾಕೆಂದರೆ ಪ್ರೀತಿಯು ದೇವರ ಸ್ವಭಾವವಾಗಿದೆ.

(2) ಕೆಟ್ಟದ್ದನ್ನು ಬಿಟ್ಟಿಬಿಡುವದು. ನಾವು ದೇವರನ್ನು ಅನುಸರಿಸುವವರಾಗಿದ್ದರೆ, ನಾವು ಪ್ರೀತಿಯ ವಿಕೃತ ಸಂಗತಿಗಳನ್ನು ನಾವು ಬಿಡಲೇಬೇಕು (5:3, 4).

ಲೋಕದ ಸಂಕೀರ್ಣವಾದ ಪ್ರೀತಿಯು ನಂಬಿಕೆಯನ್ನು ತಪ್ಪಿಸುವುದಾಗಿದೆ; ಇದು ಸ್ವಾರ್ಥಯುತವಾದದ್ದು, ಪೌಲನು ಇಲ್ಲಿ ಸೂಚಿಸಿದಂಥ ಪ್ರತಿಯೊಂದು ಪಾಪಗಳಿಂದ ಪ್ರಾಯೋಗಿಸಲ್ಪಟ್ಟದ್ದೂ ಆಗಿದೆ. ಉದಾಹರಣೆಗೆ, ಲೈಂಗಿಕ ಅನೀತಿವಂತಿಕೆಯು ಎಲ್ಲಾ ರೀತಿಯ ಲೈಂಗಿಕ ಪಾಪಗಳನ್ನು ಒಪ್ಪಿಕೊಳ್ಳುವಂಥದ್ದಾಗಿದೆ ಮತ್ತು ಸ್ವತೃಪ್ತಿಯು ಅದರ ತಿರುಳಾಗಿದೆ. ಗಂಡನು ತನ್ನ ಹೆಂಡತಿಗೆ ಅಪ್ರಾಮಾಣಿಕನಾಗಿದ್ದಾನೆ ಎಂದು ಪರಿಗಣಿಸಿರಿ. ಆತನು ಆಕೆಯ ಉತ್ತಮ ಇಚ್ಛೆಯಂತೆ ಮಾಡಲು ಸಾಧ್ಯವಾಗದೇ ಇರಬಹುದು. ಆತನು ನಿಜವಾಗಿ ಏನು ಮಾಡುತ್ತಿದ್ದಾನೋ ಅದು ಆತನ ಸ್ವಂತ ಆಶೆ ಮತ್ತು ಕಾಮವನ್ನು ತಣಿಸುವುದನ್ನು ಎದುರುನೋಡುವುದೇ ಆಗಿದೆ. ಇದು ಯೇಸು ನಮಗೆ ಅನುಸರಿಸಲು ಕೊಡಮಾಡಿದ ಉದಾಹರಣೆಯಲ್ಲ.

"ಆಶೆ" ಇದು ಪೌಲನು ಕೊಡಮಾಡಿದ ಪಟ್ಟಿಯಲ್ಲಿ ಮೊದಲನೆಯ ಸ್ಥಾನದಲ್ಲಿ ಕಾಣಿಸಿಕೊಳ್ಳುವುದೇ ಆಗಿದೆ. ನೈಜತೆಯಲ್ಲಿ, ಇದುಸಹ, ನಂಬಿಕೆಯನ್ನು ತಪ್ಪಿಸುವ ಪ್ರೀತಿಯ ರೀತಿಯಾಗಿದೆ. ಹತ್ತನೆಯ ಆಜ್ಞೆಯು "ಮತ್ತೊಬ್ಬನ ಮನೆಯನ್ನು ಆಶಿಸಬಾರದು, ಮತ್ತೊಬ್ಬನ ಹೆಂಡತಿ ... ಆಶಿಸಬಾರದು" ಎಂದು ಓದುತ್ತೇವೆ (ವಿಮೋಚನಕಾಂಡ 5:21). ಲೈಂಗಿಕ ದುರಾಶೆಯು ಆಶೆಯನ್ನೂ ಅಥವಾ ದುರಾಶೆಯನ್ನು ಅಯೋಗ್ಯವಾದ ಸಂಬಂಧವನ್ನೂ ಕೂಡ ಒಳಗೊಳ್ಳಬಹುದು. ಅಂಥ ಸ್ವಾರ್ಥಯುತವಾದ ಪ್ರೀತಿಯಲ್ಲಿ, ಆಶೆಯು ವ್ಯಕ್ತಿಯನ್ನು ತನ್ನದೇ

ಆದ ಇಚ್ಛೆಗೆ ತಕ್ಕಂತೆ ವರ್ತಿಸುವತ್ತ ನಡೆಸುವುದಾಗಿದೆ. ಈ ರೀತಿಯ ಸ್ವಾರ್ಥ ಪ್ರೀತಿಯು ಮತ್ತು ಇರುವದು ಅದರ ಪರಿಣಾಮವಾಗಿಯೂ, ಪ್ರೀತಿಯು ಕರಾಳವಾದ ಪ್ರೀತಿಯೂ ಆಗಿರುತ್ತದೆ. ಈ ಕಾರ್ಯಗಳನ್ನು ಪೌಲನು ದೇವಜನರಿಗೆ "ಹೊಂದಿಕೆಯಾಗದು" (5:4) ಎಂದು ಘೋಷಿಸಿರುವದು ಅಚ್ಚರಿಯದ್ದೇನಲ್ಲ.

ಇಂಥ ಕಾರ್ಯಗಳನ್ನು ನಾವು ಮಾಡದೇ ಇರುವದು ಮಾತ್ರವಲ್ಲ, ಆದರೆ ನಾವು ಅದರ ಬಗ್ಗೆ ಮಾತಾಡಲೂ ಕೂಡದು. ಕೋಪಕ್ಕೆ ಕಾರಣವಾಗುವದರೊಡನೆ ನಾವು ಮಾತನಾಡಲೂಬಾರದು. (ಈ ಸಂದರ್ಭದಲ್ಲಿ, ನಾವು ನಿರ್ದಿಷ್ಟವಾಗಿ ಲೈಂಗಿಕತೆಗೆ - ಇದಕ್ಕೆ ಜೊತೆಯಾದ ಅಂಶಗಳನ್ನು ಯೋಚಿಸಬೇಕು.) ಅದಲ್ಲದೇ ನಾವು ಹುಚ್ಚುಮಾತಿನಲ್ಲಿ, ಹಾಸ್ಯಸ್ಪದವಾದ ಸಂಭಾಷಣೆಯಲ್ಲಿ, ಮತ್ತು ದೇವರು ತನ್ನ ಜನರಿಗೋಸ್ಕರ ಮಾಡಿದ ಉಚ್ಚ ಶ್ರೇಣಿಯನ್ನು ಅಣುಕಿಸುವಲ್ಲಿ ತೊಡಗಿರುತ್ತೇವೆ. "ಕೋರಾಸ್ ಜೆಸ್ಟಿಂಗ್" ಇದು "ಸರಳವಾದತ್ತ ತಿರುಗಲು ಸಮರ್ಥವಾಗುವದು" ಎಂಬ ಗ್ರೀಕ್ ಪದದ ಅರ್ಥವಾಗಿದೆ. ಇದು ಹೇಳುವಂತೆ ಯಾವುದರ ಕಡೇಗಾದರೂ ಕೆಲಜನರು ಅಥವಾ ಕೆಲ ಕೆಟ್ಟ ಕಾರ್ಯಗಳನ್ನು ಮಾಡುವತ್ತ ತಿರುಗುತ್ತಾರೆ. ಎಲ್ಲಾ ಅಂಥ ಅಯೋಗ್ಯವಾದ ಮಾತುಗಳು ದೇವರನ್ನು ಅನುಸರಿಸುವಂಥವನ ಜೀವನವನ್ನು ಹಾಳುಮಾಡುವುದಾಗಿದೆ. ದೇವರು ಪ್ರೀತಿಸುವಂತೆ ಒಬ್ಬನು ಪ್ರೀತಿಸದೇ ಹೋದರೆ ಮತ್ತು ಹೊಲಸು ನಾರುವ ಬಾಯನ್ನು ಹೊಂದಿದ್ದರೆ ದೇವರು ಆಶೀರ್ವದಿಸುವಂಥವನ್ನು ಅಮೂಲ್ಯಮಾಡುತ್ತವೆ.

ದೇವ ವಾಕ್ಯವು ಕರಾಳವಾದ ಪ್ರೀತಿಯಲ್ಲಿ ಇನ್ನೂ ಇರುವಂಥವರಿಗೆ ಬಲವಾದ ಎಚ್ಚರಿಕೆಯನ್ನು ಕೊಡುವುದಾಗಿದೆ:

> ಜಾರರು ದುರಾಚಾರಿಗಳು ವಿಗ್ರಹಾರಾಧಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ.
>
> ಹುರುಳಿಲ್ಲದ ಮಾತುಗಳನ್ನಾಡುವವರಿಗೆ ಕಿವಿಗೊಟ್ಟು ಮೋಸಹೋಗಬೇಡಿರಿ; ಅಂಥ ಕೃತ್ಯಗಳ ನಿಮಿತ್ತದಿಂದ ದೇವರ ಕೋಪವು ಆತನಿಗೆ ಅವಿಧೇಯರಾಗಿರುವವರ ಮೇಲೆ ಬರುತ್ತದೆ. ನೀವು ಅವರೊಂದಿಗೆ ಪಾಲುಗಾರರಾಗಿರಬೇಡಿರಿ (5:5-7).

"ನೀನೇನನ್ನು ಮಾಡಲು ಬಯಸುತ್ತಿಯೋ ಅದನ್ನು ಮಾಡಲು ನಿನಗೆ ಹಕ್ಕಿದೆ! ಮದುವೆಗೆ ಲೈಂಗಿತೆಯು ಸರಿ" ಎಂದು ಲೋಕವು ನಮಗೆ ಹೇಳುವುದುಂಟು. ಅಂಥ ನಂಬುಗೆಗಳನ್ನು ಹೊಂದಿರುವವರು ತಮ್ಮ ಸ್ವಂತದ ಅಶೋತ್ತರಗಳನ್ನು ಮಾತ್ರ ತೃಪ್ತಿಪಡಿಸುವಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ. ಇಂಥ ಲೌಕೀಕ ತತ್ವದ ಮೂಲಕ ಮೋಸಮಾಡುತ್ತಿರುವವರ ವಿರುದ್ಧ ಪೌಲನು ಎಚ್ಚರಿಕೆಯನ್ನು ಕೊಟ್ಟಿದ್ದಾನೆ. ಲೋಕದ ಜನರು ದಾಸತ್ವದಿಂದ ಮುಕ್ತಿ ಮತ್ತು ಸ್ವಾತಂತ್ರದ ಬಗ್ಗೆ ಮಾತನಾಡುತ್ತಿರುತ್ತಾರೆ, ಆದರೆ ಅಂಥ ವಿಚಾರಗಳು ಸ್ವಾರ್ಥಪರವಾದವು ಆಗಿರುತ್ತದೆ. "ಅಂಥ ಮಾತುಗಳನ್ನು ನಂಬಬೇಡಿರಿ. ದೇವರ ಕೋಪವು ವಿಕೃತ ಪ್ರೀತಿ ಯಲ್ಲಿರುವವರ ಮೇಲೆ - ಸುಳ್ಳಾಡುವ ಕ್ರೈಸ್ತರ ಮೇಲೂ ಯಾವಾಗಲೂ ಬರುವುದಾಗಿದೆ. ಯೇಸುವು ನಿಮಗೆ ತೋರಿದ ದಿವ್ಯ ಪ್ರೀತಿಯ ರೀತಿಯಲ್ಲಿ ನಡೆಯುವುದನ್ನು ಮುಂದುವರೆಸಿರಿ" ಎಂದು ಪೌಲನು ಹೇಳುತ್ತಾನೆ.

2. *ಬೆಳಕಿನ ಮಕ್ಕಳು* (5:8-14). "ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿ ... ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳಿದುಕೊಳ್ಳಿರಿ" (5:8-10). ಬೆಳಕು ಸತ್ಯದ ಸಂಕೇತವಾಗಿದೆ. ಒಂದೇ ಸಾರಿ ನಮ್ಮ ಜೀವಿತಗಳು ಬೆಳಕೇ ಎಲ್ಲವೂ ಅಲ್ಲ ಎಂಬುದಾಗಿ ಲಕ್ಷಿಕರಿಸುತ್ತದೆ (5:8). ನಾವು ಆತ್ಮೀಕ ಕತ್ತಲೆಯಲ್ಲಿ ನಡೆಯುತ್ತೇವೆ ಮತ್ತು

ದೇವರು ಪ್ರತಿನಿಧಿಸುವ ಎಲ್ಲವುಗಳ ವಿರುದ್ಧ ಕಾರ್ಯವನ್ನು ಕೈಕೊಳ್ಳುವವರಾಗಿದ್ದೇವೆ, ಈಗ, ಯೇಸುವನ್ನು ಹಿಂಬಾಲಿಸುವ ಮೂಲಕ, ನಾವು ತೆರೆದ ಕಣ್ಣನ್ನು ಹೊಂದಿದ್ದೇವೆ; ನಾವು ಸತ್ಯದಲ್ಲಿ ನಡೆಯುತ್ತೇವೆ. ನಾವು ಸುಳ್ಳು ಮೌಲ್ಯಗಳನ್ನು ಮತ್ತು ನಾಶವಾದ ಮದುವೆಗಳ, ಸಂಬಂಧಗಳ, ಜೀವನ ವೃತ್ತಿಗಳ ತತ್ವಗಳನ್ನು ಕಂಡುಹಿಡಿಯುತ್ತೇವೆ. "ಇದನ್ನು ಮಾಡುವುದರಿಂದ ಏನು ತಪ್ಪಾಗುತ್ತದೋ ಎಂಬುದನ್ನು ನಾವು ಕಾಣೆ" ಎಂದು ಹೇಳುವುದು ಬರಲು ದೂರವಿಲ್ಲ. ಯಾಕೆಂದರೆ, ಪಾಪವು ನೈಜವಾಗಿ ಹೇಗಿದೆಯೋ ಹಾಗೆ ನಮ್ಮ ಕಣ್ಣು ಅದನ್ನು ನೋಡುವುದರಿಂದಲೇ.

(1) ನಮ್ಮ ಗುಣಲಕ್ಷಣಗಳು (5:9). ನಮ್ಮ ಜೀವಿತವು ಮೂರು ಗುಣಲಕ್ಷಣಗಳು ನಾವು ಕತ್ತಲೆಯಿಂದ ಬೆಳಕಿಗೆ ಪರಿವರ್ತನೆಯಾದದ್ದನ್ನು ಗುರುತಿಸುವುದಾಗಿದೆ. ಮೊದಲನೆಯದು "ಒಳ್ಳೆಯತನ." ದ್ವೇಷದ ಬದಲಾಗಿ (4:31), ನಮ್ಮ ಜೀವಿತಗಳು ಕ್ರಿಯಾರೂಪವಾದ ಪರೋಪಕಾರದಿಂದ ಈಗ ತುಂಬಿದೆ. ನಾವು ಅವಶ್ಯಕತೆಗಳನ್ನು ಹುಡುಕಿಕೊಳ್ಳುತ್ತೇವೆ ಮತ್ತು ಇತರರ ಜೀವಿತದಲ್ಲಿ ಅವುಗಳನ್ನು ನೀಗಿಸುತ್ತೇವೆ. ಎರಡನೆಯದಾಗಿ, "ಬೆಳಕಿನ ಮಕ್ಕಳು" ಸಹ "ನೀತಿವಂತಿಕೆಯ" ಮೂಲಕ ಗುರುತಿಸಲ್ಪಟ್ಟಿದ್ದಾರೆ. ಯಾವುದು ಸರಿ ಎಂಬುದನ್ನು ನಾವು ಮಾಡುತ್ತೇವೆ ಯಾಕೆಂದರೆ ಹಾಗೆ ಮಾಡುವದು ದೇವರನ್ನು ಮಹಿಮೆಪಡಿಸುವುದಾಗಿದೆ. ಈಗ ನಾವು ದೇವರು ನೋಡಿದ ಹಾಗೆಯೇ ನಾವು ನೋಡಿದ್ದಾದರೆ ಮತ್ತು ಅವುಗಳಿಗೆ ಆತನು ತೀರ್ಪನ್ನು ಮಾಡುವ ಹಾಗೆ ಮಾಡಿದ್ದಾದರೆ, ಆತನು ನಮಗೆ ಜೀವಿಸಲು ಮಾಡಿದಂತೆಯೇ ನಾವು ಜೀವಿಸಬಹುದಾಗಿದೆ. ಬೆಳಕಿನ ಮೂರನೆಯ ಫಲವು "ಸತ್ಯ"ವಾಗಿದೆ. ಹಳೆಯ ಜೀವಿತವು ಒಂದು ರೀತಿಯಲ್ಲಿ ಕಪಟವೂ ಮತ್ತು ಸುಳ್ಳುಮಯವೂ ಆಗಿತ್ತು. ಈಗ, ನಾವು ನಿಯತ್ತಿನ ವಿಶ್ವಾಸಯೋಗ್ಯವಾದ, ಪ್ರಾಮಾಣಿಕತೆಯ, ಯೋಗ್ಯತೆಯ ಜೀವಿತವನ್ನು ನಾವು ನಡೆಸಬೇಕು.

ನೀತಿವಂತಿಕೆಯ ಕಾರ್ಯಗಳನ್ನು ಮಾಡುವ ಮೂಲಕ ನಾವು ಬೆಳಕಿನ ಮಕ್ಕಳು ಆಗುವುದಿಲ್ಲ. ಇದು ಕೇವಲ ವಿರುದ್ಧವಾದ್ದಾಗಿದೆ. ತಾವು ಸಾಕಷ್ಟು ಒಳ್ಳೆಯ ಕಾರ್ಯಗಳನ್ನು ಮಾಡುವ ಮೂಲಕ ರಕ್ಷಿಸಲ್ಪಡಬಹುದು ಎಂದು ಕೆಲ ಜನರು ತಪ್ಪಾದ ಅಭಿಪ್ರಾಯವನ್ನು ಹೊಂದಿರುತ್ತಾರೆ. ಸತ್ಯವೇನೆಂದರೆ ನಾವು ಮೊದಲು ಬೆಳಕಿನ ಮಕ್ಕಳಾಗಬೇಕು ಮತ್ತು ಆಗ ಒಳ್ಳೆಯತನ, ನೀತಿವಂತಿಕೆಯ ಮತ್ತು ಸತ್ಯದ ಫಲಗಳು ಅಭಿವೃದ್ಧಿಹೊಂದುತ್ತವೆ. ಇವುಗಳು ರಕ್ಷಿಸಲ್ಪಡುವುದರ ಪರಿಣಾಮಗಳಾಗಿ ಹೊರತು ಕಾರಣಗಳು ಅಲ್ಲ.

(2) ನಮ್ಮ ಆಜ್ಞೆ. "ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು. ಅವುಗಳಲ್ಲಿ ಪಾಲುಗಾರರಾಗಿರದೆ ..." (5:11). ಎರಡನೆಯ ಬಾರಿ ಪೌಲನು ಕ್ರೈಸ್ತರು ಆಜ್ಞಾಪಿಸಲ್ಪಟ್ಟಂಥ ಅಲಕ್ಷಿಸಬೇಕಾದ ಫಲರಹಿತ ಕಾರ್ಯಗಳನ್ನು ಪಟ್ಟಿಮಾಡಿದ್ದಾನೆ (4:17-31; 5:3, 4). ನಾವು ಅಂಥ ಕತ್ತಲೆಯೊಡನೆ ಸಂಯೋಗವನ್ನು ಹೊಂದಿರುವುದಿಲ್ಲ.

ಕಾರಣವೇನೆಂದರೆ ಅವುಗಳು "ಫಲರಹಿತವಾದವುಗಳು" ಆಗಿದ್ದರಿಂದ ನಾವು ಅವನ್ನು ಅಲಕ್ಷಿಸಲೇಬೇಕು. ಪೌಲನ ವಿಂಗಡಣೆಯು ಒಂದು ತರದ ಫಲ ಮತ್ತು ಇನ್ನೊಂದು ತರದ ಫಲದೊಡನೆಯ ಇರುವುದಲ್ಲ. ಇದು ಫಲ ಇರುವದು ಮತ್ತು ಫಲ ಇಲ್ಲದಿರುವದೇ ಆಗಿದೆ. ಹಳೆಯ ಜೀವಿತದ ಕಾರ್ಯಗಳು ಬಂಜರವಾದದ್ದು ಮತ್ತು ಗೊಡ್ಡಾದದ್ದೂ ಆಗಿದೆ. ಅಲ್ಲಿ ಆ ಜೀವಿತದ ರೀತಿಯಲ್ಲಿ ಯಾವುದೇ ಶಾಂತಿಯಾಗಲೀ ಅಥವಾ ತೃಪ್ತಿಯಾಗಲೀ ಇಲ್ಲ. ಫಲವಿಲ್ಲದಿರುವ ಕಾರ್ಯವು ನಮಗೆ ಸಂಭವನೀಯವಾಗಿ ಜೀವಿಸಲು ನಮಗೆ ಸಹಾಯಮಾಡದು. ಪಾಪಮಯ ಜೀವಿತವು ಹೆಚ್ಚಾದ ವಾಗ್ದಾನ ಮಾಡುವಂತೆ ಕಾಣುತ್ತದೆ ಆದರೆ ಸಮಯವು ಕೇವಲ ಖಾಲಿಯಾದ ವಾಗ್ದಾನದ ಚಿಪ್ಪನ್ನು ಹೊರಹಾಕುವುದಾಗಿದೆ.

ಆಜ್ಞೆಯು ಸ್ಪಷ್ಟವಾಗಿದೆ: ಕತ್ತಲೆಯ ರೀತಿಯ ಜೊತೆ ನಾವು ಏನನ್ನೂ ಮಾಡಬೇಕಾಗಿಲ್ಲ. ದೇವರ ಹಾಗಿರುವ ನಾವು, ಪಡೆದ ಬೆಳಕಿನಲ್ಲಿ ನಡೆಯುವುದನ್ನು ಮುಂದುವರೆಸಬೇಕು.

(3) ನಮ್ಮ ಪ್ರತಿಪಾದನೆ. "ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ. ಆ ಜನರು ರಹಸ್ಯವಾಗಿ ನಡೆಸುವ ಕೆಲಸಗಳನ್ನು ಕುರಿತು ಮಾತನಾಡುವದಾದರೂ ನಾಚಿಕೆಗೆ ಕಾರಣವಾದ ಕೆಲಸವಾಗಿ ಇದೆ ..." (5:11-13). ಕತ್ತಲೆಯ ಕಾರ್ಯಗಳಿಂದ ಹೊರಬರುವದು ಎಂದರೆ, ನಮ್ಮನ್ನು ನಾವು ಜಗತ್ತಿನಿಂದ ಪ್ರತ್ಯೇಕವಾಗಿ ಇಟ್ಟುಕೊಳ್ಳುವುದಲ್ಲ. ಬದಲಾಗಿ, ಜಗತ್ತಿನ ಕತ್ತಲೆಯ ಕಾರ್ಯಗಳ ಮೇಲೆ ಬೆಳಕನ್ನು ಚೆಲ್ಲುವುದಾಗಿದೆ. ಹೇಗೆ ಯೋಗ್ಯವಾಗಿ ಕಾರ್ಯಮಾಡಬೇಕು ಎಂದು ತಿಳಿದಿರುವುದಲ್ಲ. ಯಾಕೆಂದರೆ ಇದು ಕತ್ತಲೆಯಲ್ಲಿಯೇ ಇರುವುದಾಗಿದೆ. ದೇವ ಸೃಷ್ಟಿಯ ಅಂತಿಮ ಉದ್ದೇಶವನ್ನು ಪ್ರಕಟಿಸುವಲ್ಲಿ ಅವು ಹೇಗೆ ಮಾಡುವಂಥ ರೀತಿಯಲ್ಲಿ ಹೇಗೆ ಮತ್ತು ಯಾಕೆ ಕಾರ್ಯಮಾಡುತ್ತವೆ ಎಂಬ ರೀತಿ ಯನ್ನು ವಿವರಿಸುವದರ ಒಡನೆ ನಾವು ಪ್ರತಿಪಾದಿಸುತ್ತೇವೆ.

ನಮ್ಮ ಪ್ರತಿಪಾದನೆಯನ್ನು ನಡೆಸುವಲ್ಲಿ ಎಂದಿಗೂ ಸರಳವಾಗದಂಥದ್ದಾದ, ಜನರು ಯಾವ ತಪ್ಪನ್ನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಮಾತನಾಡುವಂಥದ್ದು ಅದರಲ್ಲಿ ಒಳಗೊಂಡಿದೆ. ಯೋಹಾನನು ಹೀಗೆ ಹೇಳುತ್ತಾನೆ, "ಆ ತೀರ್ಪು ಏನೆಂದರೆ ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯನ ಕೃತ್ಯಗಳು ಕೆಟ್ಟವುಗಳಾಗಿರುವುದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನು ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವುದಿಲ್ಲ. ತಮ್ಮ ಕೃತ್ಯಗಳು ದೃಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವುದಿಲ್ಲ" (ಯೋಹಾನ 3:19, 20).

*ಮುಕ್ತಾಯ.* ದೇವರನ್ನು ಬಿಟ್ಟ ಈ ಜಗತ್ತಿನಲ್ಲಿ ನಾವು ದೇವರನ್ನು ಅನುಸರಿಸುವವರೆಂದು ಕರೆಯಲ್ಪಡುತ್ತೇವೆ. ಬೆಳಕಿನ ನಿಯೋಗಿಗಳಾಗಿದ್ದವಂತವರು ಮತ್ತು ಜನರನ್ನು ಪ್ರೀತಿಸುವವರು ಎರಡಲ್ಲಿ ಒಂದರ ಬಗ್ಗೆ ತಿಳಿದಿರುವಂಥದ್ದಾಗಿದೆ. ನಾವು ಇತರರ ಬಗೆಗೆ ಇರುವ "ಪವಿತ್ರತೆಗಿಂತ ಹೆಚ್ಚಾದದ್ದರ" ಗುಣದ ಬಗ್ಗೆ ಮಾತನಾಡುತ್ತಿಲ್ಲ. ಬದಲಾಗಿ, ಸತ್ಯದಲ್ಲಿ ಮಾತನಾಡುವ ಬಗ್ಗೆ, ಜನರು ಪಶ್ಚಾತ್ತಾಪದ ಅಡಿಯಲ್ಲಿ ಬರುವ ರೀತಿಯಲ್ಲಿ ಪಾಪತ್ವವನ್ನು ಹೊರಹಾಕುವುದರ ಬಗ್ಗೆ ನಾವು ಮಾತನಾಡುತ್ತೇವೆ. ನಾವು ಹಾಗೆ ಆಡುವಾಗ, ನಾವು ಪರಲೋಕದಲ್ಲಿರುವ ನಮ್ಮ ತಂದೆಯ ಹಾಗೆ ನಿಜವಾಗಿಯೂ ಆಗುವೆವು. Chris Bullard

ಟಿಪ್ಪಣೆಗಳು

[1]Andrew T. Lincoln, *Ephesians*, Word Biblical Commentary, vol. 42 (Dallas: Word Books, 1990), 326. [2]ಯೆಶಾಯ 9:2; 60:1, 2; ಯೋಹಾನ 1:4-9; 3:19-21; 8:12; 9:5; 12:35-46; 1 ಯೋಹಾನ 1:5; 2:8. [3]Ethelbert W. Bullinger, *A Critical Lexicon and Concordance to the English and Greek New Testament* (London: Samuel Bagster and Sons, n.d.; reprint, Grand Rapids, Mich.: Zondervan Publishing House, Regency Reference Library, 1975), 338. [4]Spiros Zodhiates, ed., *The Complete Word Study New Testament*, 2d ed. (Chattanooga, Tenn.: AMG Publishers, 1991), 884, 904. [5]Lincoln, 328. [6]Zodhiates, 906. [7]Lincoln, 329. [8]Ibid., 330. [9]S. D. F. Salmond, "The Epistle to the Ephesians," in *The Expositor's Greek Testament*, ed. W. Robertson Nicoll (Grand Rapids, Mich.: Wm. B. Eerdmans Publishing Co., 1967), 3:358. [10]Ibid., 360.

[11]Lincoln, 335. [12]ದೇವರ ರಕ್ಷಣೆ ಮತ್ತು ಆತನ ನ್ಯಾಯತೀರ್ಪು ಹಳೆಯ ಒಡಂಬಡಿಕೆ ವ್ಯತ್ಯಾಸಕ್ಕಾಗಿ ನೋಡಿರಿ ಯೆಶಾಯ 9:2; 10:17; 42:6, 7, 16; 47:5; 60:1-3. ದೇವರ ಶಕ್ತಿ ಮತ್ತು ಸೈತಾನನ ಶಕ್ತಿ ಮತ್ತು ಆತನ ಮಕ್ಕಳಲ್ಲದವರ ವ್ಯತ್ಯಾಸಕ್ಕಾಗಿ ನೋಡಿರಿ ಅಪೊಸ್ತಲರಕೃತ್ಯಗಳು 26:18; ಕೊಲಸ್ಸೆ 1:12, 13; 1 ಪೇತ್ರ 2:9, 10.